ಅಧ್ಯಕ್ಷರು : ಪುಟ್ಟಣಯ್ಯನವರೇ ಕಬ್ಬಿನ ಬಗ್ಗೆ ಪ್ರಸ್ತಾಪಿಸಬೇಕಾಗಿರುವ ವಿಚಾರ ಇವತ್ತು ಬೇಡ, ಸೋಮವಾರ, ಮಂಗಳವಾರ ತೆಗೆದುಕೊಳ್ಳೋಣ.

ಹೆಜ್ಜಾಲ ಗೋಲಿಬಾರ ಘಟನೆ ಕುರಿತು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಈ ವರ್ಷದ ಪ್ರಾರಂಭದಲ್ಲಿ ನಡೆದಂತಹ ಹೆಜ್ಜಾಲ ಗೋಲಿಬಾರ್ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಸರ್ಕಾರ ಒಪ್ಪಿಕೊಂಡಿತ್ತು. ಆದರೆ ಆರು ತಿಂಗಳು ಕಳೆದರೂ ಇದುವರೆಗೂ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿರುವ ಅಧಿಸೂಚನೆಯಾಗಲಿ ಅಥವಾ ಯಾವ ನ್ಯಾಯಧೀಶರನ್ನು ನೇಮಕ ಮಾಡಿದ್ದಾರೆಂಬ ಬಗ್ಗೆ ಮಾಹಿತಿ ಇಲ್ಲ, ಆರು ತಿಂಗಳಾದರೂ ಅಪರಾಧಿಗಳ ಮೇಲೆ ಚಾರ್ಜ್‌ಶೀಟ್ ಕೂಡ ಹಾಕಿಲ್ಲ. ಏಕೆ? ಇದರಿಂದ ಪೋಲೀಸರು ದಿನಾಬೆಳಗಾದರೆ ಯಾರು ಅಪರಾಧಿಗಳಿದ್ದಾರೆ ಅವರನ್ನು ಹಿಡಿದುಕೊಂಡು ಬರುತ್ತಿದ್ದಾರೆ ನ್ಯಾಯಾಂಗ ತನಿಖೆ ಎಲ್ಲಿ, ಯಾವಾಗ ಕಾರ್ಯಾರಂಭ ಮಾಡುತ್ತದೆಂದು ಸರ್ಕಾರ ತಿಳಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರೇ, ಹೆಜ್ಜಾಲ ಗೋಲಿಬಾರ್ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವುದಾಗಿ ಹೇಳಿದ್ದು ನಿಜ. ನ್ಯಾಯಾಂಗ ತನಿಖೆಗೆ ಒಪ್ಪಿಸಿಯಾಗಿದೆ, ಜಸ್ಟಿಸ್ ಹಿರೇಮಠ ಅವರನ್ನು ಇದರ ಬಗ್ಗೆ ತನಿಖಾಧಿಕಾರಿಯಾಗಿ ನೇಮಕ ಮಾಡಿದ್ದೇವೆ. ಈ ಬಗ್ಗೆ ಅಧಿಸೂಚನೆ ಹೊರಬಿದ್ದು ಮೂರು ವಾರಗಳಾಯಿತು. ಇನ್ನು ಅವರು ಕೆಲಸಕಾರ್ಯಗಳನ್ನು ಮಾಡುತ್ತಾರೆ. ಇನ್ನು ಅಲ್ಲಿ ಕೇಸ್‌ಗಳನ್ನು ಹಾಕುತ್ತಿರುವ ಬಗ್ಗೆ. ಕೆಲವು ಪ್ರಕರಣಗಳು ಇನ್ನೂ ತನಿಖೆ ಹಂತದಲ್ಲಿವೆ ಕೆಲವೊಂದರಲ್ಲಿ ಅಪರಾಧಿಗಳ ಮೇಲೆ ಕೇಸ್‌ಗಳನ್ನು ಹಾಕುತ್ತಿದ್ದಾರೆ. ಈ ಕೆಲಸ ನಾವು ಮುಂದುವರೆಸುತ್ತಿದ್ದೇವೆ.

ಶಿಕಾರಿಪುರ ತಾಲ್ಲೂಕಿನಲ್ಲಿ ವಿದ್ಯುತ್ ಅಭಾವ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ನಾನು ಈ ಸದನದಲ್ಲಿ ಹತ್ತಾರು ಬಾರಿ ಶಿಕಾರಿಪುರ ತಾಲ್ಲೂಕಿನಲ್ಲಿ ಇಡೀ ರಾಜ್ಯದಲ್ಲಿ ಎಲ್ಲೂ ಕಣದಷ್ಟು ವಿದ್ಯುತ್ ಅಭಾವ ಕಾಡುತ್ತಿದೆ. ಸಾಗರದಿಂದ ಸೊರಬವರೆಗೆ 110 ಕೆವಿ ಸ್ಟೇಷನ್ ಮಂಜೂರಾಗಿ ಐದು ವರ್ಷವಾಗಿದೆ. ಒಂದಲ್ಲ ಒಂದು ಕಾರಣಕ್ಕೆ ಆ ಕೆಲಸ ಕುಂಟುತ್ತಿದೆ. ಅದು ಮುಗಿದರೆ ಶಿರಾಳಕೊಪ್ಪದ ಅರ್ಧ ಹೋಬಳಿಗೆ ವಿದ್ಯುತ್ ಅನುಕೂಲವಾಗುತ್ತದೆ ಎಂದು ನಾನು ಹತ್ತಾರು ಬಾರಿ ಇಲ್ಲಿ ವಿನಂತಿ ಮಾಡಿದ್ದೆ. ಅರಣ್ಯ ಇಲಾಖೆಯವರಿಂದ ಕ್ಲಿಯರೆನ್ಸ್ ಸಿಗಲಿಲ್ಲ ಅಂದರು, ಕೆಇಬಿ ಚೇರ್ಮನ್‌ಗೆ ಹೇಳಿದೆವು, ಅವರು ದುಡ್ಡು ಕಟ್ಟಿದ್ದಾರೆ ಇಷ್ಟಾದರೂ ಸಹ ಹೋದ ಸಲ ಈ ವರ್ಷದ ಏಪ್ರಿಲ್ ಮೇ ಒಳಗೆ ಮುಗಿಸಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು ಅದನ್ನು ಕಾರ್ಯಗತಗೊಳಿಸಿಲ್ಲ. ನಮ್ಮ ತಾಲ್ಲೂಕಿನ ಜನ ಬೆಳಕಿನಲ್ಲಿರುವುದಕ್ಕೆ ಈ ಸಲ ಮುಗಿಸಿ ಏನಾದರೂ ಮಾಡುವುದಕ್ಕಾಗುತ್ತದೆ? ಜೋಗ್‌ನಿಂದ ಅಷ್ಟು ಹತ್ತಿರದಲ್ಲಿದ್ದರೂ ಈ ದುಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಎರಡನೆಯದು ಶಿಕಾರಿಪುರಕ್ಕೆ 110 ಕೆವಿ ಸ್ಟೇಷನ್ ಹೋದ

ಸಾರಿ ಮಂಜೂರು ಮಾಡಿದ್ದರು, ಈ ಸಾರಿ ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದರು. ಅದರ ಬಗ್ಗೇನೂ ನಮಗೇನೂ ಗೊತ್ತಿಲ್ಲ. ಇವರೆಡು ವಿಷಯಗಳ ಬಗ್ಗೆ ಸರ್ಕಾರದ ನಿಲುವೇನು ಎಂದು ಕೇಳಬಯಸುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಅಧ್ಯಕ್ಷರೇ, ಹಿರಿಯ ಸದಸ್ಯ ಯಡಿಯೂರಪ್ಪನವರ ಮತಕ್ಷೇತ್ರ ಶಿಕಾರಿಪುರದಲ್ಲಿ ವಿದ್ಯುತ್ ತೊಂದರೆ ಇದೆ ಎಂದು ನಮ್ಮ ಗಮನಕ್ಕೂ ಬಂದಿದೆ. ಈಗಾಗಲೇ ಸೊರಬದ ಸಬ್‌ಸ್ಟೇಷನ್ ಕೆಲಸ ಕಂಪ್ಲೀಟಾಗಿದೆ. ಸಾಗರದಿಂದ ಸೊರಬಕ್ಕೆ ಬರುವ 110 ಕೆವಿ ಟ್ರಾನ್ಸ್‌ಮಿಷನ್ ಲೈನ್ ಕೆಲಸ 103 ಟವರ್‌ಗಳಿದ್ದು ಅಷ್ಟೂ ಕಂಪ್ಲೀಟಾಗಿದೆ. ಈಗ ಲೈನ್ ಎಳೆಯುವ ಕೆಲಸ ಬಾಕಿ ಇದೆ, ಎಲ್ಲ ಮೆಟೀರಿಯಲ್ಸ್ ಇದೆ. ಇನ್ನೆರಡು ಮೂರು ಜಾಗಗಳಲ್ಲಿ ಫಾರೆಸ್ಟ್ ಇಲಾಖೆಯಿಂದ ಮರ ಕಡಿಯುವುದಕ್ಕೆ ಕ್ಲಿಯರೆನ್ಸ್ ನಮಗೆ ಬಂದಿಲ್ಲ. ಅದು ಬಂದು ಕ್ಲಿಯರ್ ಆದರೆ ಈ ತೊಂದರೆ ನಿವಾರಣೆ ಆಗುತ್ತದೆ. ಇನ್ನೊಂದು ಶಿಕಾರಿಪುರದ್ದು ಕೇಳಿದಿರಿ, ಹೋದವರ್ಷ ಅದು ಮಂಜೂರಾಗಿರಲಿಲ್ಲ. 1997-98ರಲ್ಲಿ ಇದನ್ನು ನಾವು ಹಾಕಿಕೊಂಡಿದ್ದೇವೆ. ಸುಮಾರು 78 ಲಕ್ಷ ರೂಪಾಯಿಗಳು ಬೋರ್ಡಿನ ಮುಂದೆ ಅಪ್ರೂವಲ್‌ಗಾಗಿ ಇಟ್ಟಿದ್ದೇವೆ, ಇದನ್ನು ಆದಷ್ಟು ಬೇಗ ಅಪ್ರೂವಲ್ ಮಾಡಿಸಿಕೊಟ್ಟು ಈಗೇನು ತೊಂದರೆ ಇದೆ ಅದನ್ನು ನಿವಾರಣೆ ಮಾಡಿಸಿಕೊಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಜಿಲ್ಲಾಧಿಕಾರಿಗಳ ಹತ್ತಿರ ನಾನು ಮಾತನಾಡಿದ್ದೇನೆ. ಅರಣ್ಯಾಧಿಕಾರಿಗಳ ಹತ್ತಿರ ವೆರಿಫೈ ಮಾಡಿಸಿ, ದುಡ್ಡು ಕಟ್ಟಿ ಆಗಿದೆ ನಿಮ್ಮ ಇಲಾಖೆಯಿಂದ. ಅರಣ್ಯದವರು ವಿನಾಕಾರಣ ಅಡ್ಡಿ ಮಾಡುತ್ತಿದ್ದಾರೆ, ಡಿಸಿ ಹೇಳಿದ್ದಾರೆ. ನನಗೆ ಶಿಕಾರಿಪುರಕ್ಕಿಂತ ಸಾಗರ ಸೊರಬ 110 ಕೆವಿ ಕೆಲಸ ಮುಗಿದರೆ ನಾವು ಬದುಕುತ್ತೇವೆ, ಒಂದೆರಡು ತಿಂಗಳ ಅವಧಿಯಲ್ಲೇನಾದರೂ ಮುಗಿಸುತ್ತೀರಾ ?

ಶ್ರೀ ಶರಣಬಸಪ್ಪ ದರ್ಶನಾಪುರ : ಗರಿಷ್ಠ ನಾಲ್ಕೈದು ತಿಂಗಳಲ್ಲಿ ಮುಗಿಸಿಕೊಡುತ್ತೇವೆ.

ಸಚಿವರಿಂದ ಹೇಳಿಕೆ

ಕಾಡುಗಳ್ಳ ವೀರಪ್ಪನ್ ರಾಜು ಎಂಬ ವಾಚ್‌ಮನ್‌ನನ್ನು ಬಿಡುಗಡೆ ಮಾಡಿರುವುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) : ಅಧ್ಯಕ್ಷರೇ, ವೀರಪ್ಪನ್ ಬಗ್ಗೆ ಯಾವುದೇ ಮಾಹಿತಿಯನ್ನು ಸದಸ್ಯರಿಂದ ಮುಚ್ಚಿಡುವುದು ಬೇಡ ಎಂಬ ಉದ್ದೇಶದಿಂದ, ರಾಜು ಎಂಬ ಒಬ್ಬ ವಾಚ್‌ಮನ್ ಅನ್ನು ಬಿಟ್ಟಿದ್ದಾರೆ. ಅವನು ಕೊಳ್ಳೇಗಾಲ ತಾಲ್ಲೂಕಿನವನು. ನಮ್ಮ ಡಿಎಫ್‌ಓ ಅವನ ಮನೆಗೆ ಹೋಗಿದ್ದಾರೆ ಅವನ ಹೆಂಡತಿ ಅವರಿಗೆಲ್ಲ ಹೇಳುವುದಕ್ಕೆ. ಅವನು ಚೆನ್ನೈನಲ್ಲಿದ್ದಾನೆ, ಅಲ್ಸರ್‌ನಿಂದ ನರಳುತ್ತಿದ್ದ ಅದಕ್ಕಾಗಿ ಕರೆದುಕೊಂಡು ಬಂದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉಳಿದವರನ್ನು ಯಾವಾಗ ಬಿಡುತ್ತೇನೆ ಎಂದು ಏನಾದರೂ ತಮಗೆ ಫೋನ್ ಮೂಲಕ ತಿಳಿಸಿದ್ದಾರೆಯೇ ?